# ಸಹಾಯಕ ಆಯುಕ್ತರ ನ್ಯಾಯಾಲಯ, ಬಳ್ಳಾರಿ

ಸಂ: ಕಂದಾಯ/ಅಪೀಲು/135/14-15

ದಿನಾಂಕ : 05-08-2016

ಉಪಸ್ಥಿತರು: ಶ್ರೀಲೋಕೇಶ್ ಪಿ.ಎನ್ (ಕ.ಆ.ಸೇ)

ಸಹಾಯಕ ಆಯುಕ್ತರು, ಬಳ್ಳಾರಿ.

| ವಾದಿಗಳು | ಪ್ರತಿವಾದಿಗಳು |
|---|---|
| ಶ್ರೀಮತಿ ರಾಧಾ ಬಾಯಿ ಗಂಡ ಲೇಟ್ ಗೋವಿಂದ ರಾವ್,<br>ಸಾ\|\|ಗಾಂಧಿ ನಗರ ಮುಖ್ಯ ರಸ್ತೆ, ಬಳ್ಳಾರಿ<br>(1) ಟಿ ಪ್ರಕಾಶ್ (2) ಟಿ ನೂರ್ ಬಾಷಾ (3) ಬಿ ರಮೇಶ್ (4) ಅನ್ವರ್ ಬಾಷಾ | (1) ತಹಶೀಲ್ದಾರರು, ಬಳ್ಳಾರಿ,<br>(2) ಕಂದಾಯ ನಿರೀಕ್ಷಕರು, ಬಳ್ಳಾರಿ ಮತ್ತು<br>(3) ಗ್ರಾಮ ಲೆಕ್ಕಾಧಿಕಾರಿಗಳು, ಹದ್ದಿನಗುಂಡು |

**ದಾವಾ ಜಮೀನಿನ ವಿವರ :-**

| ತಾಲ್ಲೂಕು | ಗ್ರಾಮ | ಸ. ನಂ. | ವಿಸ್ತೀರ್ಣ (ಎಕರೆಗಳಲ್ಲಿ) |
|---|---|---|---|
| ಬಳ್ಳಾರಿ | ಹದ್ದಿನಗುಂಡು | 171/A/3 ಪೈಕಿ | 00.05.50 |

--@@@--

ವಾದಿಯು ಅವರ ವಕೀಲರ ಮುಖಾಂತರ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136(2) ರಡಿಯಲ್ಲಿ ಕಂದಾಯ ನಿರೀಕ್ಷಕರು, ಬಳ್ಳಾರಿ ಇವರ ಆದೇಶ ಸಂಖ್ಯೆ: ಎಂ.ಆರ್ 35 /1993-94 ದಿನಾಂಕ: 14.07.1994 ರ ಆದೇಶದ ವಿರುದ್ಧ ಈ ನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿ ಮೇಲ್ಮನವಿಯನ್ನು ಸಲ್ಲಿಸುವಲ್ಲಿ ಆದ ವಿಳಂಬಕ್ಕೆ ಕಾಲಮಿತಿ ಕಾಯ್ದೆಯಡಿ ವಿಳಂಬ ಮನ್ನಾಕ್ಕೆ ಅರ್ಜಿ ಸಲ್ಲಿಸಿರುತ್ತಾರೆ. ವಿಳಂಬ ಮನ್ನಾ ಮಾಡಿ ಪ್ರಕರಣವನ್ನು ದಾಖಲಿಸಿಕೊಳ್ಳಲಾಗಿರುತ್ತದೆ. ನೈಸರ್ಗಿಕ ನ್ಯಾಯ ದೃಷ್ಟಿಯಿಂದ ಉಭಯ ಪಕ್ಷಗಾರರಿಗೂ ನೋಟೀಸಗಳನ್ನು ಕಳುಹಿಸಿ ದಿನಾಂಕ: 09-10-2015 ಮತ್ತು 05-08-2016 ರಂದು ಪ್ರಕರಣದ ವಿಚಾರಣೆಯನ್ನು ಕೈಗೊಳ್ಳಲಾಗಿರುತ್ತದೆ.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ವಾದಿಗಳ ಪರ ವಕೀಲರು ದಿನಾಂಕ: 05-08-2016 ರಂದು ಈ ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಕರಣದ ವಿಚಾರಣೆಯನ್ನು ಕೈಗೊಳ್ಳಲಾಯಿತು , ಬಳ್ಳಾರಿ ತಾಲ್ಲೂಕಿನ ಹದ್ದಿನಗುಂಡು ಗ್ರಾಮದ ಸ.ನಂ 171/A/3 ಪೈಕಿ ವಿಸ್ತೀರ್ಣ: 00.05.50 ಎಕರೆ ಜಮೀನಿಗೆ ಸಂಬಂಧಿಸಿದಂತೆ ಲಭ್ಯ ದಾಖಲೆಗಳನ್ನು ಪರಿಶೀಲಿಸಲಾಯಿತು, ಪ್ರಸ್ತಾಪಿತ ಸ.ನಂ ಮತ್ತು ಪ್ರಶ್ನಿತ ಆದೇಶವನ್ನು ಪರಿಶೀಲಿಸಲಾಗಿ ಕರ್ನಾಟಕ ಭೂ ಕಂದಾಯ ಅಧಿನಿಯಮ ಕಾಲಂ 95 ನ್ನು ಉಲ್ಲಂಘನೆ ಮಾಡಿ ಕೃಷಿಜಮೀನನ್ನು ಅನ್ಯತಾ ಕಾರ್ಯಕ್ಕೆ ಬಳಸಲು ಖರೀದಿಸಿರುವುದರಿಂದ ಕಂದಾಯ ಪರಿವೀಕ್ಷಕರು ಬಳ್ಳಾರಿ ಇವರು ಹಕ್ಕು ದಾಖಲೆಯನ್ನು ತಿರಸ್ಕರಿಸಿರುವುದು ಸಮಂಜಸ ವಾಗಿರುವುದರಿಂದ ಸದರಿ ವಿವಾದಾಸ್ಪದ ಜಮೀನಿಗೆ ಈ ಕೆಳಕಂಡಂತೆ ಆದೇಶ.

:: ಆದೇಶ ::

ಮೇಲ್ಮನವಿಯನ್ನು ತಿರಸ್ಕರಿಸಿದೆ.

ಪೀಠಿಕೆಯಲ್ಲಿ ವಿವರಿಸಿದ ಕಾರಣಗಳ ಹಿನ್ನೆಲೆಯಲ್ಲಿ ಬಳ್ಳಾರಿ ತಾಲ್ಲೂಕಿನ ಹದ್ದಿನಗುಂಡು ಗ್ರಾಮದ ಸ.ನಂ 171/A/3 ಪೈಕಿ ವಿಸ್ತೀರ್ಣ: 00.05.50 ಎಕರೆ ಜಮೀನಿಗೆ ಸಂಬಂಧಿಸಿದಂತೆ ಭೂ ಕಂದಾಯ ಅಧಿನಿಯಮ ಕಲಂ 95ರ ಉಲ್ಲಂಘನೆ (ಕೃಷಿಜಮೀನನ್ನು ಅನ್ಯತಾ ಕಾರ್ಯಕ್ಕೆ ಖರೀದಿಸಿರುವುದು) ಕಾರಣ ಮೇಲ್ಮನವಿಯನ್ನು ತಿರಸ್ಕರಿಸಿ ಆದೇಶಿಸಿದೆ.

ಈ ಆದೇಶವನ್ನು ಹೇಳಿ, ಬರೆಯಿಸಿ, ತಪ್ಪುಗಳನ್ನು ತಿದ್ದಿ ದಿನಾಂಕ: 05-08-2016 ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ.

ಸಹಾಯಕ ಆಯುಕ್ತರು,

ಬಳ್ಳಾರಿ.

ಪ್ರತಿಯನ್ನು ವಾದಿ ಮತ್ತು ಪ್ರತಿವಾದಿಗಳಿಗೆ ಹಾಗೂ ತಹಶೀಲ್ದಾರರು ಬಳ್ಳಾರಿ ಇವರಿಗೆ .